# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 76/2019 ಸಿಡಬ್ಲ್ಯೂ: 1 ಪಿಡಬ್ಲ್ಯೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 18-01-2025

ಹೆಸರು : ನಿಖಿತಾ

ಗಂಡ ಹೆಸರು : ರಾಜಕುಮಾರ್

ವಯಸ್ಸು : 34 ವರ್ಷ

ಉದ್ಯೋಗ : ಮನೆ ಕೆಲಸ

ವಾಸಸ್ಥಳ : ಖರ್ಚು ಖೇಡಾ, ತಾ ಚಿಂಚೋಳ್ಳಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಮೃತ ರಾಜಕುಮಾರ್ ನನ್ನ ಗಂಡ. ಸದರಿ ಯವರು ರಸ್ತೆ ಅಪಘಾತದಲ್ಲಿ ದಿ. 26-08-2018 ರಂದು ಮೃತ ಪಟ್ಟಿರುತ್ತಾರೆ.

ನಾನು ಮತ್ತು ಚಾ ಸಾ 7, 8 ರವರು ಮನೆಯಲ್ಲಿದ್ದಾಗ ಚಾ ಸಾ 6 ರವರು ನಮಗೆ ಕರೆ ಮಾಡಿ ತಿಳಿಸಿದೇನೆಂದರೆ ನನ್ನ ಗಂಡನಾದ ರಾಜಕುಮಾರ್ ಈತನು ಅಪಘಾತದಲ್ಲಿ ಮೃತ ಪಟ್ಟಿದ್ದಾರೆ ಹಾಗೂ ನನಗೆ ಗಾಯಗಳಾಗಿರುತ್ತದೆ. ಸದರಿ ಅಪಘಾತ ಸೇಡಂ ಸಕ್ಯೂಟ್ ಹೌಸ್ ಹತ್ತಿರ ಆಗಿರುತ್ತದೆ. ಸದರಿ ಅಪಘಾತ ಒಂದು ಕಾರು ನಂ. ಕೆ ಎ 32 ಎನ್ 4342 ನೇದ್ದನ್ನು ಆರೋಪಿತನು ಅತಿವೇಗ ಹಾಗೂ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ನನ್ನ ಗಂಡ ಮತ್ತು ಚಾ ಸಾ 6 ರವರು ಕುಳಿತುಕೊಂಡು ಹೋಗುವ ಮೊಟಾರು ಸೈಕಲ್ ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿರುತ್ತಾನೆ. ನಂತರ ನಾನು ಕೂಡಲೇ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ನೋಡಲಾಗಿ ಸದರಿ ಅಪಘಾತದಲ್ಲಿ ನನ್ನ ಗಂಡನಾದ ಮೃತ ರಾಜಕುಮಾರ್ ರವರ ತಲೆಗೆ ಹಾಗೂ ಮೂಗಿಗೆ ಗಾಯ ಆಗಿದ್ದು, ಅದೇ ರೀತಿ ಚಾ ಸಾ 6 ರವರಿಗೆ ಕೈ ಮತ್ತು ಕಾಲಿಗೆ ಗಾಯಗಳು ಆಗಿರುತ್ತದೆ. ನಂತರ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಸದರಿ ಅಪಘಾತ ಆರೋಪಿತರ ತಪ್ಪಿ ನಿಂದ ಆಗಿರುತ್ತದೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 1 (ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ನನ್ನ ಗಂಡನ ಮೊಟಾರು ಸೈಕಲ್ ಚೆಸ್ಸಿ ನಂ. MBLHAR184HHJ70688 ಇರುತ್ತದೆ ಎಂದರೆ ಸರಿ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎ ಎಂ ವಕೀಲರಿಂದ ಃ

ದಿ. 26-08-2018 ರಂದು ರಾತ್ರಿ 11-00 ಸುಮಾರಿಗೆ ಅಪಘಾತ ಆಗಿರುವ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿದ್ದೆ. ನಮ್ಮ ಮನೆಯಿಂದ ಸೇಡಂ ಸರ್ಕಾರಿ ಆಸ್ಪತ್ರೆ ಸುಮಾರು 25 ಕಿ ಮಿ ಅಂತರದಲ್ಲಿದೆ ಎಂದರೆ ಸರಿ. ಚಾಸಾ 6 ರವರು ಹೇಳಿದಾಗ ಮಾತ್ರ ನಮಗೆ ಈ ಅಪಘಾತದ ಬಗ್ಗೆ ಗೊತ್ತಾಗಿತ್ತು ಎಂದರೆ ಸರಿ. ನಾನು ಸದರಿ ಅಪಘಾತ ಕಣ್ಣಾರೆ ಕಂಡಿಲ್ಲ. ನ್ಯಾಯಾಲಯದ ಮುಂದಿರು ಆರೋಪಿತನಿಗೆ ನಾನು ಈ ಮೊದಲನ ಭಾರಿಗೆ ನೋಡುತ್ತಿದ್ದೇನೆ ಎಂದರೆ ಸಾಕ್ಷಿಯು ಇದಕ್ಕಿಂತಾ ಮೊದಲು ಪೊಲೀಸ್ ಠಾಣೆಯಲ್ಲಿ ನೋಡಿದ್ದೇನೆ ಎಂದು ನುಡಿಯುತ್ತಾರೆ. ಆದರೆ ನನಗೆ ದಿನಾಂಕ ಮತ್ತು ಸಮಯ ಹೇಳಲು ಬರುವುದಿಲ್ಲ. ನಾನು ಮತ್ತು ಚಾ ಸಾ 6 ರವರು ಕೂಡಿಕೊಂಡು MACT ನ್ಯಾಯಾಲಯದಲ್ಲಿ ಪರಿಹಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದೆವು ಎಂದರೆ ಸರಿ. ಅದರಲ್ಲಿ Insurance ಕಂಪನಿಯವರು ನಮ್ಮ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ನನ್ನ ಗಂಡನಾದ ಮೃತ ರಾಜಕುಮಾರ್ ಈತನು ಫ್ಯಾಕ್ಟರಿನಲ್ಲಿ ಪ್ರಥಮ ದರ್ಜೆಯ ಗುತ್ತಿಗೆ ದಾರ ಎಂದು ಕೆಲಸವನ್ನು ಮಾಡುತ್ತಿದ್ದನು.

ನಾನು ಪರಿಹಾರ ಹಣದಿಂದ ಅರ್ಧ ಹಣವನ್ನು ಈಗಾಲೇ ಪಡೆದುಕೊಂಡಿರುತ್ತೇನೆ. ಚಾ ಸಾ 6 ರವರು ಪೋಲೀಸ್ ಠಾಣೆಯಲ್ಲಿ ಆರೋಪಿತನಿಗೆ ತೋರಿಸಿರುತ್ತಾರೆ. ಸಾಕ್ಷಿಯು ಮುಂದುವರೆದು ಪೊಲೀಸರು ಮತ್ತು ಚಾ ಸಾ 6 ರವರು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿಲ್ಲ. ಚಾ ಸಾ 6 ರವರು ಅಪಘಾತ ಆದ ನಂತರ ಆಸ್ಪತ್ರೆಯಲ್ಲಿ ಸೇರಿಕೆಯಾಗಿದ್ದರು ಎಂದರೆ ಸರಿ.

ನಾನು ಮತ್ತು ಚಾ ಸಾ 7, 8 ರವರು ಮನೆಯಲ್ಲಿದ್ದಾಗ ಚಾ ಸಾ 6 ರವರು ನಮಗೆ ಕರೆ ಮಾಡಿ ತಿಳಿಸಿದೇನೆಂದರೆ ನನ್ನ ಗಂಡನಾದ ರಾಜಕುಮಾರ್ ಈತನು ಅಪಘಾತದಲ್ಲಿ ಮೃತ ಪಟ್ಟಿದ್ದಾರೆ ಹಾಗೂ ನನಗೆ ಗಾಯಗಳಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಅಪಘಾತ ಸೇಡಂ ಸರ್ಕ್ಯೂಟ್ ಹೌಸ್ ಹತ್ತಿರ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಅಪಘಾತ ಒಂದು ಕಾರು ನಂ. ಕೆ ಎ 32 ಎನ್ 4342 ನೇದ್ದನ್ನು ಆರೋಪಿತನು ಅತಿವೇಗ ಹಾಗೂ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ನನ್ನ ಗಂಡ ಮತ್ತು ಚಾ ಸಾ 6 ರವರು ಕುಳಿತುಕೊಂಡು ಹೋಗುವ ಮೋಟಾರು ಸೈಕಲ್ ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾನು ಕೂಡಲೇ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ನೋಡಲಾಗಿ ಸದರಿ ಅಪಘಾತದಲ್ಲಿ ನನ್ನ ಗಂಡನಾದ ಮೃತ ರಾಜಕುಮಾರ್ ರವರ ತಲೆಗೆ ಹಾಗೂ ಮೂಗಿಗೆ ಗಾಯ ಆಗಿದ್ದು, ಅದೇ ರೀತಿ ಚಾ ಸಾ 6 ರವರಿಗೆ ಕೈ ಮತ್ತು ಕಾಲಿಗೆ ಗಾಯಗಳು ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಅಪಘಾತ ಆರೋಪಿತರ ತಪ್ಪಿ ನಿಂದ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಅಪಘಾತ ಆರೋಪಿಯ ತಪ್ಪಿ ನಿಂದ ಆಗದೇ ಇದ್ದರೂ ಸಹ ಪರಿಹಾರ ಹಣ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**